**ಆಗ ಯಾವ ಸಾಹಿತ್ಯ ಮತ್ತು ವ್ಯಕ್ತಿಗಳು ನಿಮಗೆ ರೋಲ್ ಮಾಡೆಲ್‌ಗಳಾಗಿದ್ದರು.**

ನನ್ನನ್ನು ಬರೀ 'ಬಂಡಾಯ ಕವಿ' ಅನ್ನುವುದಿಲ್ಲವಲ್ಲ? 'ಜಾಜಿಮಲ್ಲಿಗೆ' ಕವಿ, 'ದಲಿತ ಕವಿ', 'ಹಿರಿಯ ಕವಿ' ಇತ್ತೀಚೆಗೆ 'ವಿಶ್ವವಿದ್ಯಾಲಯದ ಕವಿ' ಎಂದು ಕರೆಯುವುದುಂಟು. ಅಷ್ಟೇ ಏಕೆ ನಿಮ್ಮ ಲೇಖನ ಒಂದರಲ್ಲಿ ನೀವೇ 'ಸುಡುಬಿಸಿಲಿನ ಮಲ್ಲಿಗೆ ಕವಿ' ಎಂದು ಕರೆದಿರಲ್ಲವೇ? ಅದು ಅವರವರ ಪ್ರೀತಿಗೆ, ಭಾವನೆಗೆ ಬಿಟ್ಟದ್ದಲ್ಲವೆ? ನನಗೆ ಯಾವ ವಿಶೇಷಣಗಳೂ ಬೇಡ. ಕವಿ ಎಂದರೆ ಅಷ್ಟೇ ಸಾಕು. ಹಾಗೆ ಕರೆಯದಿದ್ದರೂ ನಡೆಯುತ್ತದೆ. 'ಎನಗಿಂತ ಕಿರಿಯರಿಲ್ಲ' ಇದು ನನ್ನ ಮನೋಭಾವ. ನನಗನ್ನಿಸಿದ್ದನ್ನು ಅಭಿವ್ಯಕ್ತಿಸಿದ್ದೇನಷ್ಟೇ. ಇದಕ್ಕೆ ನನ್ನ ಬೆನ್ನ ಹಿಂದಿನ, ಕಣ್ಣ ಮುಂದಿನ ಪರಿಸರವೇ ಕಾರಣ. ನಾನು ಬಸವ ಜನಿಸಿದ ನಾಡಿನಿಂದ ಬಂದವನು. ಪ್ರಾಥಮಿಕ ಶಾಲೆಯಲ್ಲಿದ್ದಾಗ ನಮ್ಮೂರಿನಲ್ಲಿ ಒಬ್ಬರು ಸ್ವಾತಂತ್ರ್ಯ ಹೋರಾಟಗಾರರಿದ್ದರು. ಸ್ವಾತಂತ್ರ್ಯ ದಿನಾಚರಣೆ, ಗಾಂಧಿ ಜಯಂತಿ ದಿನ, ಊರ ತುಂಬಾ ಪ್ರಭಾತಫೇರಿ ಮಾಡಿಸುತ್ತಿದ್ದರು. ಆಗೆಲ್ಲ ಬಸವಣ್ಣನ 'ತಂದೆ ನೀನು, ತಾಯಿ ನೀನು,' ವಚನವನ್ನು ನಮ್ಮಿಂದ ಹೇಳಿಸುತ್ತಿದ್ದರು. ಅದೂ ಈಗಲೂ ಕಣ್ಮುಂದೆ ಕಟ್ಟಿದಂತಿದೆ. ದೊಡ್ಡವನಾದ ಮೇಲೆ ವಚನ ಸಾಹಿತ್ಯದಲ್ಲಿ ಬಸವಣ್ಣನ ವಚನಗಳನ್ನು ಅಧ್ಯಯನ ಮಾಡಿದೆ. ಹೀಗಾಗಿ ನನಗೆ ಬುದ್ಧನ ಪ್ರೀತಿ, ಬಸವಣ್ಣನ ದಯೆ ಮತ್ತು ಸಮಾನತೆ, ಅಲ್ಲಮನ ಅಂತಃಕರಣ, ಮಹಾತ್ಮ ಗಾಂಧಿಯವರ ಸತ್ಯ, ಅಂಬೇಡ್ಕರರ ಹೋರಾಟ, ಕುವೆಂಪು ಅವರ ವಿಶ್ವಮಾನವ ತತ್ವ, ನಟ ರಾಜಕುಮಾರರ ಸರಳ ಬದುಕು, ಬರಗೂರು ರಾಮಚಂದ್ರಪ್ಪನವರ ಮುಕ್ಕಾಗದ ಮಾನವೀಯತೆ, ನನ್ನ ಪ್ರೀತಿಯ ಗುರು ಹಾಗೂ ಮೊದಲ ಓದುಗರಾದ ಬಿ.ಕೆ. ಹಿರೇಮಠರ ಸಜ್ಜನಿಕೆ, ಅಪರೂಪದ ರಾಜಕಾರಣಿಗಳಾದ ಎಸ್.ಆರ್. ಪಾಟೀಲ ಹಾಗೂ ವೀರಣ್ಣ ಚರಂತಿಮಠ ಅವರ ಹೃದಯವಂತಿಕೆ, ಪ್ರಾಮಾಣಿಕತೆ ಹಾಗೂ ದಾರ್ಶನಿಕರಾದ ಸಿದ್ಧೇಶ್ವರ ಸ್ವಾಮಿಗಳು, ಕನ್ನಡದ ಸ್ವಾಮೀಜಿ ಗದುಗಿನ ತೋಂಟದಾರ್ಯ ಮಠದ ಸಿದ್ಧಲಿಂಗ ಸ್ವಾಮಿಗಳ ಪ್ರೀತಿ, ಹಾರೈಕೆಗಳು ಪ್ರೇರಣೆಯಾದವು. ಇವರೆಲ್ಲ ನನಗೆ ರೋಲ್ ಮಾಡೆಲ್‌ಗಳು. ಇವರೆಲ್ಲರ ಜೊತೆ ನನ್ನ ತಂದೆ ತಾಯಿ ಕೂಡ ನನಗೆ ರೋಲ್ ಮಾಡೆಲ್‌ಗಳಾಗಿದ್ದಾರೆ. ಇವರೆಲ್ಲ ತಾವು ಕವಿತೆಯಾಗಿ ನನ್ನನ್ನು ಕವಿಯನ್ನಾಗಿಸಿದ್ದಾರೆ.

◆ **ಮಾತ್ರವಲ್ಲ, ರಮ್ಯ (ರೋಮ್ಯಾಂಟಿಕ್) ಪ್ರೇಮ ಕವಿ ಕೂಡ. ಈ ಜುಗಲ್‌ಬಂದಿ ಹೇಗೆ ಸಾಧ್ಯವಾಯಿತು? ಇದಲ್ಲದೇ ನಿಮಗೆ ನಿಮ್ಮ ರೋಮ್ಯಾಂಟಿಕ್ ಕವಿತೆಗಳು ಹೆಚ್ಚು ಜನಪ್ರಿಯತೆಯನ್ನು ತಂದು ಕೊಟ್ಟಿವೆ.**

ಮನುಷ್ಯನಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ. ಸಾಧ್ಯಮಾಡಿಕೊಳ್ಳಬೇಕಷ್ಟೇ. ನಿಸರ್ಗದಲ್ಲಿ ಕ್ಷಣ ಕ್ಷಣಕ್ಕೂ ಪ್ರೀತಿ. ಬಂಡಾಯ ನಡೆದೇ ಇರುತ್ತದೆ. 'ಬರೀ ಚೆಲುವಿನಿಂದ ಬರುವುದೇನು ಹೇಳು ಸಖಿ. ಆ ಚಲುವಿಗಷ್ಟು ಇಷ್ಟು ಇರಲಿ, ಪ್ರೀತಿ ಎಂಬ ಚಕಮಕಿ' ಇದು ನನ್ನದೇ ಕವಿತೆಯ ಸಾಲು. ಪ್ರೀತಿಗೆ ಮೂಲ ತಳಹದಿ ಬಂಡಾಯ. ಬಂಡಾಯ ದ್ವೇಷಕ್ಕೆ ಮೂಲವಾಗಬಾರದು. ಪ್ರೀತಿ ಇದ್ದಲ್ಲಿ ಬಂಡಾಯ ಇರುತ್ತದೆ. ಬಂಡಾಯ ಇದ್ದಲ್ಲಿ ಪ್ರೀತಿ ಇರುತ್ತದೆ. ಅವೆರಡೂ ಒಂದಾಗಿ ಸಾಗಿದಾಗಲೇ ಪರಿವರ್ತನೆ, ಬದಲಾವಣೆ ಸಾಧ್ಯ ಎಂಬುದು ನನ್ನ ನಂಬುಗೆ. ಜಗತ್ತು ನಿಂತಿದ್ದೇ ಪ್ರೀತಿಯ ಮೇಲೆ. ಅದು ನೆಲ ಮುಟ್ಟುವ ಪ್ರೀತಿಯಾಗಿರಬೇಕು. ಎಲ್ಲರೂ ಒಂದಾಗಿ ಸೇರಿ ನಡೆವ ಪ್ರೀತಿಯಾಗಿರಬೇಕು. ಭೂಮಿ, ಸೂರ್ಯ, ಚಂದ್ರರ ನಡುವೆ ಇದ್ದದ್ದು ಕಾಲಾತೀತವಾದ ಬಂಡಾಯ ಮತ್ತು ಪ್ರೀತಿ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರರಲ್ಲಿ ಪ್ರೀತಿ, ಬಂಡಾಯ ಎರಡೂ ಒಟ್ಟಾಗಿ ಇದ್ದುದರಿಂದಲೇ ವ್ಯವಸ್ಥೆಯಲ್ಲಿ ಬದಲಾವಣೆಯಾಗಿದ್ದು. ಬುದ್ಧನಂತೂ ಪ್ರೀತಿಯನ್ನೇ ಬಿತ್ತಿ, ಬೆಳೆದು ಅದನ್ನೆ ಹಂಚಿದ. ತನ್ನ ಅನುಭವ ಮಂಟಪದಲ್ಲಿ ಬಸವಣ್ಣ ಎಲ್ಲ ಕಾಯಕ ಜೀವಿಗಳನ್ನು ಪ್ರೀತಿಯಿಂದಲೇ ಕಾಣುತ್ತಿದ್ದ.